**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಪ್ರಾ.ಸಾ. 8

ಚಾ.ಸಾ. 10

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 25.09.2025**

| | |
|---|---|
| ಸಾಕ್ಷಿದಾರರ ಹೆಸರು | ಶಂಭು |
| ತಂದೆಯ ಹೆಸರು | ಶಂಭು ಲಿಂಗಯ್ಯ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ದುಂಡನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಸಾಕ್ಷಿ ನಿಪಿ.2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಎಷ್ಟು ವರ್ಷಗಳ ಹಿಂದೆ ಮಾಡಿದ್ದೇನೆಂದು ನನಗೆ ನೆನಪಿಲ್ಲ. ಸದರಿ ಸಹಿಯನ್ನು ನಾನು ದುಂಡನಹಳ್ಳಿಯಲ್ಲಿ ಹಾಕಿದ್ದೇನೆ. ಪೊಲೀಸರು ಹಾಕಿಸಿಕೊಂಡರು. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ದಿನಾಂಕ 11.03.2023 ರ ನಿಪಿ.9 ನೋಟಿಸಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.9 ಬಿ ಎಂದು ಗುರುತಿಸಲಾಯಿತು. ನಾನು ನೋಡುತ್ತಿರುವ ಫೋಟೋಗಳಲ್ಲಿ ನಾನು ಇದ್ದೇನೆ. ಸಾಕ್ಷಿ ನಿಪಿ.3 ಫೋಟೋಗಳನ್ನು ನೋಡಿ ಮೊದಲ ಆರು ಫೋಟೋಗಳಲ್ಲಿ ನಾನು ಎಡದಿಂದ ನಾಲ್ಕನೇಯವನು ಎಂದು ನುಡಿಯುತ್ತಾರೆ. ನಾನು ಹೊಲದಿಂದ ವ್ಯವಸಾಯ ಮುಗಿಸಿ ಮನೆಗೆ ದಾರಿಯಲ್ಲಿ

ಬರುತ್ತಿದ್ದಾಗ ಪೊಲೀಸರು ಅಲ್ಲಿ ಇದ್ದರು ಮತ್ತು ಕರೆದು ಫೋಟೋ ತೆಗೆಸಿದರು. ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 11.03.2023 ರಂದು ಸಂಜೆ 5.20 ಗಂಟೆ ಸಮಯಕ್ಕೆ ಪೊಲೀಸರು ಚಾಸಾ.1 ರವರ ಮನೆಯ ಬಳಿ ಬಂದಿದ್ದರು, ಅಲ್ಲಿ ನಾನೂ ಕೂಡ ಇದ್ದೆ ಮತ್ತು ಪೊಲೀಸರು ನನ್ನನ್ನು ಸಾಕ್ಷಿಯಾಗಿ ಕರೆದರು ಎಂದರೆ ಸರಿ. ನಿಪಿ.9 ರಂತೆ ನೋಟಿಸು ನೀಡಿ ಸಹಿ ಪಡೆದರು ಎಂದರೆ ಸರಿ. ಅಲ್ಲಿ ಚಾಸಾ.1 ತನ್ನ ಮನೆಯ ಮುಂಭಾಗದ ಜಾಗ ತೋರಿಸಿ ಇದೇ ಜಾಗದಲ್ಲಿ ಆರೋಪಿಗಳು ನಮ್ಮ ಮೇಲೆ ಹಲ್ಲೆ ಮಾಡಿದ್ದು ಎಂದು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲದೆ ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ಡ್ರ್ಯಾಗರ್ ಮತ್ತು ಹಲ್ಲೆ ಮಾಡಿದಾಗ ಸಾಕ್ಷಿಗಳು ಧರಿಸಿದ್ದ ರಕ್ತದ ಕಲೆ ಇದ್ದ ಎರಡು ಟೀ ಶರ್ಟ್‌ಗಳನ್ನು ಚಾಸಾ.1 ರವರು ತೋರಿಸಿ ಹಾಜರುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಪೊಲೀಸರು ಅವುಗಳನ್ನು ಅಮಾನತ್ತುಪಡಿಸಿ ನಿಪಿ.2 ರಂತೆ ಮಹಜರು ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

3. ಅಲ್ಲಿಂದ ಚಾಸಾ.1 ಮತ್ತು ಇತರರು ಪೊಲೀಸರನ್ನು ಸದರಿ ಸ್ಥಳದಿಂದ 20 ಅಡಿ ದೂರದಲ್ಲಿರುವ ತುಮಕೂರು-ಮದ್ದೂರು ರಾಜ್ಯ ಹೆದ್ದಾರಿ ಬಳಿ ಕರೆದುಕೊಂಡು ಹೋಗಿ ಇಲ್ಲಿ ಕೃತ್ಯದ ಹಿಂದಿನ ದಿನ ಆರೋಪಿ 2 ಮತ್ತು 3 ರವರು ಚಾಸಾ.1 ಮತ್ತು ಚಾಸಾ.2 ರವರನ್ನು ಗಲಾಟೆ ಮಾಡಿ ಬೈದ ಸ್ಥಳ ಎಂದು ಹೇಳಿ ನನ್ನ ಸಮಕ್ಷಮ ಸ್ಥಳ ತೋರಿಸಿದರು ಎಂದರೆ ಗೊತ್ತಿಲ್ಲ. ಆ ಸ್ಥಳವನ್ನೂ ಕೂಡ ಪೊಲೀಸರು ಪರಿಶೀಲಿಸಿದರು ಎಂದರೆ ಗೊತ್ತಿಲ್ಲ. ಬಳಿಕ ನಾನು ಎಲ್ಲಾ ವಿಚಾರ ತಿಳಿದು ನಿಪಿ.2 ಅನ್ನು ಓದಿ, ಅರ್ಥ ಮಾಡಿಕೊಂಡು ಸಹಿ ಮಾಡಿದೆ ಎಂದರೆ ಸರಿಯಲ್ಲ.

*4.* ಎಲ್ಲಾ ವಿಚಾರ ತಿಳಿದು ನಾನು ಸಹಿ ಮಾಡಿದ್ದರೂ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಪಿ ವಕೀಲರಿಂದಃ**

ಆರೋಪಿತರ ವಕೀಲರು ಪಾಟೀ ಸವಾಲು ಇಲ್ಲ ಎಂದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.